ಬಿಸಾಡುವುದೇ ಹೆಚ್ಚು ಎನ್ನುವಂತೆ ಮನೆಯಲ್ಲಿ ಸಾಕಿದ ನಾಯಿಗೆ ಕೂಡಾ ದೊಡ್ಡ ಪಾಲು ಅನ್ನ ಸಲ್ಲುತ್ತದೆ. ಮನೆಮಗಳು ತಾನು ಅದಕ್ಕಿಂತಾ ಕೀಳಾಗಿ ಹೋದೆನಾ? ಒಂದು ವಿಷಯ ಅರ್ಥ ಮಾಡಿಕೊಂಡಿದ್ದಳು ಕಾವೇರಿ. ಕೆಲಕೆಲವು ಸಂಬಂಧಗಳಲ್ಲಿ ಪರಸ್ಪರ ಮುಖ ಕಂಡರಾಗದೇ ಇರುವುದಕ್ಕೆ ಸಕಾರಣ ಬೇಕೆಂದೇನಿಲ್ಲ. ಅದು ಹಾಗೇ. ಲಾಗಾಯ್ತಿನಿಂದಲೂ ಹಾಗೇ. ಹೆಚ್ಚಿನ ಮನೆಗಳಲ್ಲಿ ಹಾಗೇ. ತೀರಾ ಕಾರಣ ಕೊಡಲೇಬೇಕೆಂದರೆ ಒಂದು ಕಾರಣ ಬೆಟ್ಟು ಮಾಡಬಹುದು. ಕೈ ಹಿಡಿದ ಗಂಡ ತನ್ನ ತಂಗಿಯನ್ನು ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಾನಲ್ಲ, ಪ್ರೀತಿ ತೋರಿಸುತ್ತಿದ್ದಾನಲ್ಲ, ಅದೇನಿದ್ದರೂ ಹೆಂಡತಿಯ ಹಕ್ಕು. ಕೇವಲ ಹೆಂಡತಿಯದು.

★★★

ಕಾವೇರಿ ಬೀಗ ತೆಗೆಯುವ ಸದ್ದು ಕೇಳಿ ನೆರೆಮನೆಯ ಬಾಗಿಲು ತೆಗೆದುಕೊಂಡಿತು. ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡಳು ಆ ಮನೆಯ ಗೃಹಿಣಿ.

"ಇದೇನ್ರೀ, ಇನ್ನೊಂದು ತಿಂಗಳು ನೀವು ಈ ಕಡೆ ತಲೆ ಹಾಕಲ್ಲ ಅಂದ್ಕಂಡಿದ್ರೆ ಇವತ್ತೇ ಬಂದ್ಬಿಟ್ಟದೀರಿ? ನಾಡಿದ್ದೇ ಮದುವೆ ಅಲ್ವಾ?"

ಕಾವೇರಿ ಕಣ್ಣುಂಬಿಕೊಂಡು ತನ್ನ ಮೇಲೆರಗಿದ ಗಂಡಾಂತರ ಹೇಳಿಕೊಂಡಳು.

"ಹರ್ಪಿಸ್ ಆಗಿದೆಯೇನ್ರೀ? ಥೋ, ಇದೆಂತಾ ಗ್ರಾಚಾರ ನಿಮ್ದು? ಎಣ್ಣೆ ಮಂತ್ರಿಸಿ ಕೊಡೋರೊಬ್ರು ನಂಗೆ ಗೊತ್ತಿದಾರೆ. ಹಚ್ಚಿದ್ರೆ ನಾಕು ದಿನಕ್ಕೆ ವಾಸಿಯಾಗುತ್ತಂತೆ."

"ಡಾಕ್ಟ್ರ ಹತ್ರ ಹೋಗು ಅಂದಿದಾನೆ ಅಣ್ಣ..."

"ಹಂಗೇ ಮಾಡಿ. ಅದು ಒಂದು ಸುತ್ತು ಬಂತು ಅಂದ್ರೆ ಔಸ್ತಿ ನಾಟಲ್ವಂತೆ. ಜೋಪಾನ ಮಾರಾಯ್ರಾ..."

ಹಿಂದೆ ಹಿಂದೆ ಮನೆ ಹೊಕ್ಕಬೇಕಾಗಿದ್ದವಳು ಹಾಗೇ ಬಾಗಿಲು ಮುಚ್ಚಿಕೊಂಡಿದ್ದನ್ನು ಕಾವೇರಿಗೆ ಗಮನಿಸದೆ ಇರಲಾಗಲಿಲ್ಲ. ಅಂಟುರೋಗ ಅಂದರೆ ಎಲ್ಲರಿಗೂ ಭಯ. ಕಾವೇರಿ ಬಾಗಿಲು ಅಗುಳಿ ಹಾಕಿ ಒಳಗೆ ಬಂದು ಕೈಚೀಲವನ್ನು ಮೂಲೆಗೆ ಬಿಸಾಕಿದಳು. ಬಸ್ಸಿನಲ್ಲಿ ಕೂತಾಗ ಎಲ್ಲರೆದುರು ಅಳಬಾರದೆಂದು ಎದೆಯೊಳಗೆ ಕಟ್ಟಿಕೊಂಡಿದ್ದ ಉಮ್ಮಳ ಕಟ್ಟೆಯೊಡೆದು ಹೊರ ಬಂತು. ಕಾವೇರಿ ನೆಲದ ಮೇಲೆ ಕುಸಿದು ಕೂತು ಸಶಬ್ದವಾಗಿಯೇ ಅತ್ತಳು. ಇಡೀ ಮನೆ ಕಳ್ಳ ಹೊಕ್ಕು ಗೂರಾಡಿದಂತೆ ಅಸ್ತವ್ಯಸ್ತವಾಗಿದೆ. ಮದುವೆಮನೆಗೆ ಹೊರಡುವ ಅವಸರದಲ್ಲಿ, ಉತ್ಸಾಹದಲ್ಲಿ ಎಲ್ಲಿದ್ದಿದ್ದನ್ನು ಅಲ್ಲೇ ಬಿಟ್ಟು, ಅಗೋ, ಇರುವ ಒಂದು ಕೋಣೆಯ ಮೂಲೆಯಲ್ಲಿ ಮದುವಣಗಿತ್ತಿ ಬಿಚ್ಚಿ ಎಸೆದ ಹಳೆಯ ನೈಟ್ ಗೌನ್ ಹಾಗೆಯೇ ಗುಪ್ಪೆಯಾಗಿ ಬಿದ್ದಿದೆ. ಒಂಟಿ ಮಂಚದ ಮೇಲೆ ಮುದುರಿಸಿಟ್ಟ ತನ್ನ ಸೀರೆ. ಕೊನೆಗಳಿಗೆಯವರೆಗೂ ಪಾರ್ಲರಿಗೆ ಎಡತಾಕುತ್ತಿದ್ದ ಹುಡುಗಿ, "ನೀನೂ ಡೈ ಮಾಡ್ಕೋ ಅತ್ತೆ, ಎಷ್ಟು ಚಂದ ಕಾಣ್ತೆ ಗೊತ್ತಾ?" ಎಂದು ವರಾತ ತೆಗೆದು,

"ನನ್ನ ಮಕಕ್ಕೊಂದು ಚಂದ ಬೇರೆ ಕೇಡು" ಅಂದಿದ್ದಳು ಕಾವೇರಿ.

"ನೋಡು, ಹಿಂಗೆಲ್ಲಾ ಜೀವ ಭಾರ ಆದೋರ ಹಂಗೆ ನೀನು ಮಾತಾಡ್ತಿದ್ರೆ ಸಿಟ್ಟು ಬರುತ್ತೆ ನಂಗೆ. ಎಷ್ಟೊರ್ಷ ನಿಂಗೆ?"

"ನಿನ್ನಪ್ಪನಿಗಿಂತಾ ಮೂರು ವರ್ಷ ಸಣ್ಣೋಳು, ನೀನೇ ಲೆಕ್ಕ ಹಾಕ್ಕಾ..."

"ಇನ್ನೂ ನಲವತ್ತೊಂಬತ್ತು ಅನ್ನು. ಒಳ್ಳೇ ಮುದುಕಿ ಥರ ಆಡ್ತೀಯಪ್ಪಾ..."

ಕಾವೇರಿ 'ಅಯ್ಯಬ್ಬಾ' ಎಂದು ಉಗುಳು ನುಂಗಿಕೊಳ್ಳುವಂತೆ ಸಾವಿರಗಟ್ಟಲೆ ಸುರಿದು ತನ್ನ